ಆ) ಇವುಗಳಿಗೆ ಬಿಡುಗಡೆ ಮಾಡಿದ ಅನುದಾನ ಈ ಕೆಳಕಂಡಂತಿದೆ.

ಮತಕ್ಷೇತ್ರವಾರು	ವರ್ಷವಾರು (ರೂ. ಲಕ್ಷಗಳಲ್ಲಿ)	
	2008–09	**2009–10**
1) ಅರಭಾವಿ	ರೂ.7.50	–
2) ಹುಕ್ಕೇರಿ	ರೂ.9.00	–
3) ನಿಪ್ಪಾಣಿ	ರೂ.5.00	–
4) ಚಿಕ್ಕೋಡಿ/ಸದಲಗಾ	ರೂ.20.00	ರೂ.15.00
5) ಬೆಳಗಾವಿ	ರೂ.15.00	ರೂ.10.00
6) ಗೋಕಾಕ	–	ರೂ.5.00
ಒಟ್ಟು	**ರೂ.56.50**	**ರೂ.30.00**

ಶಾದಿಮಹಲ್ ನಿರ್ಮಾಣ ಬಗ್ಗೆ

540 ಶ್ರೀ ಖಾದರ್ ಯು.ಟಿ. (ಮಂಗಳೂರು) ವಿ.ಸ. ಸದಸ್ಯರು : ಮಾನ್ಯ ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಲ್ಪಸಂಖ್ಯಾತರ ಉಪಯೋಗಕ್ಕಾಗಿ ಈ ವರ್ಷ ಶಾದಿಮಹಲ್‌ಗಳನ್ನು ನಿರ್ಮಿಸುವ ಉದ್ದೇಶ ಸರಕಾರಕ್ಕೆ ಇದೆಯೇ; ಹಾಗಿದ್ದಲ್ಲಿ, ಇದಕ್ಕಾಗಿ ಮೀಸಲಿಟ್ಟ ಹಣದ ವಿವರ ಒದಗಿಸುವುದು?

ಪ್ರೊ. ಡಾ. ಮುಮ್ತಾಜ್ ಅಲಿ ಖಾನ್ (ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು) :

ಅ) ದಕ್ಷಿಣ ಕನ್ನಡ ಜಿಲ್ಲೆಗೆ ಈ ವರ್ಷ ಶಾದಿಮಹಲ್/ ಸಮುದಾಯ ಭವನ ನಿರ್ಮಾಣಕ್ಕಾಗಿ ರೂ. 33.50 ಲಕ್ಷ ಬಿಡುಗಡೆ ಮಾಡಲಾಗಿದ್ದು, ಈ ಕೆಳಕಂಡ 4 ಸಂಸ್ಥೆಗಳು ಇದರ ಪ್ರಯೋಜನ ಪಡೆದಿವೆ.

ಸಂಸ್ಥೆ ಹೆಸರು	ಮೊತ್ತ
1. ಅನ್ವರುಲ್ ಹುದಾಯಂಗ್ ಮೆನ್ಸ್ ಅಸೋಸಿಯೇಷನ್, ಅರಂತೋಡು.	ರೂ. 5.00 ಲಕ್ಷ
2. ಜಾಮಿಯಾ ಮಸೀದಿ, ಬೆಳುವಾಯಿ	ರೂ. 7.50 ಲಕ್ಷ
3. ಅಲ್ ಮದೀನ ಇಸ್ಲಾಮಿಕ್ ಕಾಂಪ್ಲೆಕ್ಸ್, ಮಡವೂರು.	ರೂ. 5.00 ಲಕ್ಷ
4. ಕೂಳೂರು ಮೊಹಿಯುದ್ದೀನ್ ಜುಮ್ಮಾ ಮಸ್ಜಿದ್, ಪಂಜಿಮೊಗರು	ರೂ. 16.00 ಲಕ್ಷ

ಜಿಲ್ಲಾವಾರು ಅನುದಾನವನ್ನು ಮೀಸಲಿಟ್ಟಿರುದಿಲ್ಲ. ಜಿಲ್ಲೆಗಳಿಂದ ಬಂದ ಪ್ರಸ್ತಾವನೆಗಳನ್ನು ಪರಿಶೀಲಿಸಿ ಸರಿ ಇದ್ದಲ್ಲಿ, ಅನುದಾನ ಮಂಜೂರಾತಿ ನೀಡಿ ಬಿಡುಗಡೆ ಮಾಡಲಾಗುತ್ತಿದೆ.

ಮೇಲುಕೋಟೆ ವಿಧಾನಸಭಾ ಕ್ಷೇತ್ರ ಪರಿಶಿಷ್ಟ ಜಾತಿ/ವರ್ಗಗಳ ಮತ್ತು ಹಿಂದುಳಿದ ವರ್ಗಗಳ ಹಾಸ್ಟೆಲ್‌ಗಳಿಗೆ ಸ್ವಂತ ಕಟ್ಟಡ ಹೊಂದುವ ಬಗ್ಗೆ :

509 ಶ್ರೀ ಪುಟ್ಟರಾಜು ಸಿ.ಎಸ್. (ಮೇಲುಕೋಟೆ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ಜಿಲ್ಲೆಯ ಮೇಲುಕೋಟೆ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳ ಹಾಸ್ಟೆಲ್‌ಗಳೆಷ್ಟು; ಇವುಗಳಲ್ಲಿ ಸ್ವಂತ ಕಟ್ಟಡ ಹೊಂದಿರುವ ಹಾಸ್ಟೆಲ್‌ಗಳೆಷ್ಟು; ಖಾಸಗಿ ಕಟ್ಟಡಗಳಲ್ಲಿ ನಡೆಸುತ್ತಿರುವ ಹಾಸ್ಟೆಲ್‌ಗಳೆಷ್ಟು;

ಆ) ಸ್ವಂತ ಕಟ್ಟಡಗಳನ್ನು ಹೊಂದುವ ಬಗ್ಗೆ ಸರಕಾರ ಕ್ರಮ ಕೈಗೊಂಡಿದೆಯೇ; ಹಾಗಿದ್ದಲ್ಲಿ, ಪ್ರಸ್ತಕ ವರ್ಷದಲ್ಲಿ ಇದಕ್ಕಾಗಿ ಮೀಸಲಿಟ್ಟ ಹಣವೆಷ್ಟು; ಪೂರ್ಣ ಮಾಹಿತಿ ನೀಡುವುದು?